ಚಾರ್ಯರು 'ವಿದ್ಯಾರ್ ಅಮಿ' ಅಥವಾ 'ಜ್ಞಾನದ ಅಹಂಕಾರ'ವನ್ನು ಇಟ್ಟುಕೊಂಡಿದ್ದರು ಎನ್ನುತ್ತಾರೆ. ಆದರೆ ಅದ್ವೈತವನ್ನು ಕುರಿತಾಗಿ ಚರ್ಚೆಯನ್ನು ಪ್ರೋತ್ಸಾಹಿಸುವುದಿಲ್ಲ. ಅವರ ಪ್ರಕಾರ ಅದು ಮಾತಿಗೆ ಮೀರಿದ ಸ್ಥಿತಿ – ಸಮಾಧಿಯಲ್ಲಿ ಇರದ ಹೊರತು ಅಹಂಕಾರವನ್ನು ಕಳೆದುಕೊಳ್ಳಲಾಗದು. ಸಾಮಾನ್ಯ ಮನುಷ್ಯ ಬ್ರಹ್ಮವನ್ನು ನಂಬುವಂತೆಯೇ, ಪ್ರಪಂಚವನ್ನೂ ಪುರಸ್ಕರಿಸಬೇಕು. ವೇದಾಂತಿಗಳ ಹಾಗೆ ಲೋಕವನ್ನು ತಿರಸ್ಕರಿಸಬೇಡಿ ಎಂದು ಅವರು ನೇರವಾಗಿಯೇ ಶಿಷ್ಯರಿಗೆ ಹೇಳುತ್ತಾರೆ. ಬದಲಿಗೆ ಇಷ್ಟದೇವತೆಯನ್ನು ಪೂಜಿಸಿ ಎಂದು ಉಪದೇಶಿಸುತ್ತಾರೆ.

ವಿವೇಕಾನಂದರದು ಇದೇ ನಿಲುವು – ಅವರ ಪ್ರಕಾರ ವೇದಾಂತವೆಂದರೆ ಅದ್ವೈತ ಮಾತ್ರವಲ್ಲ, ದ್ವೈತ, ವಿಶಿಷ್ಟಾದ್ವೈತ, ದ್ವೈತಾದ್ವೈತ – ಎಲ್ಲವೂ ವೇದಾಂತವೆನ್ನಿಸಿಕೊಳ್ಳುತ್ತವೆ. ಶ್ರುತಿಗಳು ಅದ್ವೈತವನ್ನು ಮಾತ್ರ ಹೇಳುತ್ತವೆ ಎಂದು ಸಾರಿದ ಶಂಕರರು ಒಳ್ಳೆಯದನ್ನು ಮಾಡಲಿಲ್ಲ ಎಂದು ಅವರು ಆರೋಪಿಸುತ್ತಾರೆ. ೧೮೯೭ರ ನವೆಂಬರ್ ೧೨ರಂದು ಲಾಹೋರ್‌ನಲ್ಲಿ ಕೊಟ್ಟ 'Vedanta' ಎಂಬ ಉಪನ್ಯಾಸದಲ್ಲಿ, "ಉಪನಿಷತ್ತುಗಳೆಲ್ಲವೂ ಅದ್ವೈತ ಒಂದನ್ನೇ ಬೋಧಿಸುತ್ತವೆ, ಇನ್ನೇನನ್ನೂ ಅಲ್ಲ ಎಂದು ಭಾವಿಸುವ ತಪ್ಪನ್ನು ಶಂಕರಾಚಾರ್ಯರು ಮಾಡಿದರು; ಎಲ್ಲೆಲ್ಲಿ ದ್ವೈತಭಾವದ ವಾಕ್ಯಗಳು ಬರುವುವೋ ಅಲ್ಲೆಲ್ಲ ಅವರು ಅವುಗಳ ಅರ್ಥವನ್ನು ತಿರುಚಿ ತಿಣುಕಿ ತಮ್ಮ ವಾದಕ್ಕೆ ಸರಿಹೊಂದುವಂತೆ ಮಾಡಿಕೊಂಡರು" ಎಂದಿದ್ದಾರೆ. ಕೊಲ್ಕತಾದಲ್ಲಿ ಕೊಟ್ಟ 'The Vedanta in All its Phases' ಎಂಬ ಉಪನ್ಯಾಸದಲ್ಲಿ "ಶಂಕರಾಚಾರ್ಯರಂಥ ಮಹಾಭಾಷ್ಯಕಾರರೂ ಸಹ ಕೆಲವೊಮ್ಮೆ ಸಂಹಿತೆಗಳನ್ನು ಸರಿಯಲ್ಲವೆನಿಸುವಂತಹ ರೀತಿಯಲ್ಲಿ ಅರ್ಥೈಸಿರುವರು" ಎಂದಿದ್ದಾರೆ. ತಮಗೆ ವಿವೇಕಾನಂದರು ಹೇಳಿದ ಮಾತನ್ನು ಸ್ವಾಮಿ ಶುದ್ಧಾನಂದರು ಸ್ಮರಿಸಿ ಹೀಗೆ ದಾಖಲಿಸಿದ್ದಾರೆ: "ವೇದಾಂತ ಸೂತ್ರಗಳು ಕೇವಲ ಅದ್ವೈತವಾದವನ್ನೇ ಪ್ರತಿನಿಧಿಸುತ್ತವೆ ಎಂದು ಯಾರು ಹೇಳುತ್ತಾರೆ? ಶಂಕರರು ಅದ್ವೈತವಾದಿಯಾಗಿದ್ದರು – ಅವರು ಎಲ್ಲ ಸೂತ್ರಗಳನ್ನೂ ಅದ್ವೈತದ ನಿಲುವಿನಿಂದಲೇ ವಿವರಿಸಿದರು; ಆದರೆ ನೀವು ಪ್ರತಿಸೂತ್ರದ ಪ್ರತಿಪದದ ಅರ್ಥವನ್ನೂ ತಿಳಿದುಕೊಳ್ಳಲೆತ್ನಿಸಬೇಕು – ನೀವು ವ್ಯಾಸರು ಏನನ್ನು ಹೇಳಲು ಉದ್ದೇಶಿಸಿದ್ದಾರೆ ಎಂಬುದನ್ನು ಅರಿಯಲು ಯತ್ನಿಸಬೇಕು – ಉದಾಹರಣೆಗೆ **ಅಸ್ಮಿನ್ನಸ್ಯ ಚ ತದ್ಯೋಗಂ ಶಾಸ್ತಿ** ಎಂಬ ಬ್ರಹ್ಮಸೂತ್ರ (೧:೧:೧೯). ಭಗವಾನ್ ವ್ಯಾಸರು ಇಲ್ಲಿ ಅದ್ವೈತ ವಿಶಿಷ್ಟಾದ್ವೈತ ಎರಡನ್ನೂ ಹೇಳಿದ್ದಾರೆ ಎಂದು ನನಗನ್ನಿಸುತ್ತದೆ."

ರಾಮಕೃಷ್ಣ–ವಿವೇಕಾನಂದರಿಬ್ಬರೂ ಅದ್ವೈತವನ್ನು ಅಧ್ಯಾತ್ಮದ ತುಟ್ಟತುದಿ ಎಂದು ಭಾವಿಸಿದರೂ, ವೇದಾಂತವೆಂದರೆ ಕೇವಲ ಅದ್ವೈತ ಎಂಬುದನ್ನು ಒಪ್ಪುವುದಿಲ್ಲ. ಮತೀಯ ಕಲಹಗಳನ್ನು ಅವರು ದೂರವಿಡುತ್ತಿದ್ದರು. ವಿವೇಕಾನಂದರೆಂದಂತೆ, "ವೇದಾಂತ ಎಂಬ ಪದವನ್ನು ಉಪನಿಷತ್ತುಗಳಿಂದ ಉದ್ಭವಿಸಿರುವ ಒಂದೇ ಒಂದು ಮತಕ್ಕೆ ಸೀಮಿತಗೊಳಿಸುವುದು ತಪ್ಪು. ವೇದಾಂತ ಎಂಬ ಪದ ಎಲ್ಲವನ್ನೂ ಒಳಗೊಳ್ಳುತ್ತದೆ. ವೇದಾಂತಿಯೆಂದು ಕರೆದುಕೊಳ್ಳುವುದಕ್ಕೆ ವಿಶಿಷ್ಟಾದ್ವೈತಿಗೂ ಅದ್ವೈತಿಯಷ್ಟೇ ಹಕ್ಕಿದೆ... ಅನಾದಿಕಾಲದಿಂದಲೂ ಭಾರತದಲ್ಲಿ ಈ ಮೂರು ಮತಗಳು ನಡೆದುಬಂದಿವೆಯೆಂಬುದನ್ನು ನೀವು ಅರಿತುಕೊಳ್ಳಬೇಕು; ಶಂಕರರೇ ಅದ್ವೈತಮತವನ್ನು ಆವಿಷ್ಕರಿಸಿದವರು ಎಂದು ನೀವು ನಂಬಿಕೊಳ್ಳಬಾರದು. ಶಂಕರರು ಹುಟ್ಟುವ ಮೊದಲೇ ಅದ್ವೈತ ಅಸ್ತಿತ್ವದಲ್ಲಿತ್ತು. ಅವರು ಅದರ ಕೊನೆಯ ಪ್ರತಿನಿಧಿಗಳಲ್ಲೊಬ್ಬರು."

ವೇದಾಂತದ ಬಗೆಗಿನ ಈ ಸಾರ್ವತ್ರಿಕ ವಿಶಾಲದೃಷ್ಟಿಯೇ ರಾಮಕೃಷ್ಣ–ವಿವೇಕಾನಂದರ ವೇದಾಂತದ ತಿರುಳು. ಇದಕ್ಕೆ ಕಾರಣ ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಅನುಭವಗಳು. ಅವರ ಜೀವನದಲ್ಲಿ ಕರ್ಮ, ಜ್ಞಾನ, ಭಕ್ತಿಗಳು ಸಮ್ಮಿಳಿತವಾಗಿದ್ದವು. ರಾಮಕೃಷ್ಣರಿಗೆ ಅದ್ವೈತದ ನಿರ್ವಿಕಲ್ಪ ಸಮಾಧಿ ಸಿದ್ಧಿಸಿದ್ದರೂ ಸಹ ಅವರು ಅದ್ವೈತವನ್ನು ಬೋಧಿಸಲಿಲ್ಲ; ಬದಲಿಗೆ ಭಕ್ತಿಯನ್ನೇ ಬೋಧಿಸಿದರು. ವಿವೇಕಾನಂದರು ಶ್ರೀರಾಮಕೃಷ್ಣರನ್ನು ವೇದಾಂತದ ಅತ್ಯುತ್ತಮ ಮಾನವೀಯ ಆದರ್ಶವೆಂದು ಭಾವಿಸಿದರೂ, ಕೇವಲ ಅದ್ವೈತದ ಮೇಲ್ಪಂಕ್ತಿಯೆಂದು ಎಂದೂ ತಿಳಿದಿರಲಿಲ್ಲ. ಶ್ರೀರಾಮಕೃಷ್ಣ ವಚನವೇದದಲ್ಲಿ ಎಲ್ಲ ಆಧ್ಯಾತ್ಮಿಕ ಪಥಗಳ ವಿಚಾರವೂ ಬಂದಿದೆ – ದ್ವೈತ, ಅದ್ವೈತ; ನಾಮರೂಪಗಳುಳ್ಳ ದೇವರು, ನಿರಾಕಾರ ನಿರ್ಗುಣ ಬ್ರಹ್ಮ ಎಲ್ಲವೂ. ವಿವೇಕಾನಂದರಿಗೆ ಶಂಕರರ ತೀಕ್ಷ್ಣ ಅದ್ವೈತದಲ್ಲಿ ಈ ದೃಷ್ಟಿವೈಶಾಲ್ಯ ಕಾಣಿಸಲಿಲ್ಲ. ಬುದ್ಧದೇವನ ಮೃದು ಹೃದಯವನ್ನು ಅವರು ಶಂಕರರಲ್ಲಿ ಕಾಣಲಿಲ್ಲ. ಗುರುವಿನ ಬೋಧನೆಯಿಂದಲ್ಲದಿದ್ದರೂ ಶಿಷ್ಯರ ಅಸಾಮರ್ಥ್ಯದಿಂದಾಗಿ ಶಾಂಕರ ಪಂಥದವರು ಜಾತಿಪದ್ಧತಿಯನ್ನು ಎತ್ತಿ ಹಿಡಿಯುತ್ತ ಮುನ್ನಡೆದದ್ದನ್ನು ವಿವೇಕಾನಂದರು ಮೆಚ್ಚಲಿಲ್ಲ. ಮನೀಷಾಪಂಚಕದಲ್ಲಿ 'ಎಲ್ಲೆಡೆ ಸತ್ ಒಂದನ್ನೇ ಕಾಣುವವನು ಬ್ರಾಹ್ಮಣನಾಗಲಿ ಚಂಡಾಲನಾಗಲಿ, ಅವನೇ ನನ್ನ ಗುರು' ಎಂದಿರುವ ಮಹಾ ಅದ್ವೈತಿ ಶಂಕರಾಚಾರ್ಯರು ಜಾತಿಯನ್ನು ಎತ್ತಿಹಿಡಿದಿರಲಾರರು.

ವೇದಾಂತಿಯಾದವನಿಗೆ ಹೃದಯವಿರಬೇಕೆಂಬ ವಿವೇಕಾನಂದರ ಕಲ್ಪನೆ, ಮಾಯೆಯ ಬಗ್ಗೆ ಅವರ ಧೋರಣೆಯಲ್ಲಿ ಚೆನ್ನಾಗಿ ಕಂಡುಬರುತ್ತದೆ. ರೋಮಾ ರೋಲಾ ವಿವೇಕಾನಂದರನ್ನು, 'ಮೂರ್ತೀಭವಿಸಿರುವ ನವಯುಗದ ವೇದಾಂತ' ಎನ್ನುವಾಗ ಇದನ್ನೇ ಉದ್ದೇಶಿಸಿರಬೇಕೆಂದು ತೋರುತ್ತದೆ. ಸಮಾಧಿಗೆ ಆಗಾಗ ಚಕ್ಕರ್ ಹೊಡೆದು ಪ್ರಪಂಚಕ್ಕೆ ಇಳಿದುಬಂದು ಲೋಕದ ಆಗುಹೋಗುಗಳಲ್ಲಿ ಆಟವಾಡುತ್ತಿದ್ದ ವಿಶಿಷ್ಟ ಅನುಭಾವಿ ಶ್ರೀರಾಮಕೃಷ್ಣರು. "ಮಾಯಾ ಪ್ರಪಂಚವೂ ಭಗವಂತನಿಗೇ ಸೇರಿದ್ದು; ಅದನ್ನು ಧಿಕ್ಕರಿಸಲಾಗದು" ಎನ್ನುವುದು ವಿವೇಕಾನಂದರ ನಿಲುವು. ವಿವೇಕಾನಂದರ ಜ್ಞಾನಯೋಗದಲ್ಲಿ ಮಾಯೆಯ ಬಗ್ಗೆಯೇ ನಾಲ್ಕು ಉಪನ್ಯಾಸಗಳಿವೆ. 'Maya and Freedom' ಎಂಬ ಉಪನ್ಯಾಸದಲ್ಲಿ ವಿವೇಕಾನಂದರು, "ವೇದಾಂತಿಯಾದವನ ಮನಸ್ಸಿಗೆ ಈಗಿರುವಂತೆ ಮಾಯೆ ಒಂದು ಭಯಾನಕವಾದ, ಭರವಸೆಯೇ ಇಲ್ಲದ ಕನಸಿನ ಹಾಗೆ ಅಲ್ಲದೆ ಸುಂದರವಾಗುವುದು; ಈ ಪ್ರಪಂಚ ಒಂದು ಸೆರೆಮನೆ ಎನಿಸದೆ ಆಡುಂಬೊಲವಾಗುವುದು; ಅಪಾಯಗಳು, ಕಷ್ಟಸಂಕಟಗಳು – ಇವೆಲ್ಲ ದೈವೀಸ್ವರೂಪವನ್ನು ತಾಳಿ ತಮ್ಮ ನೈಜಸ್ವಭಾವವನ್ನು ತೋರುವುವು" ಎನ್ನುತ್ತಾರೆ. ಅದ್ವೈತವನ್ನು ಬಿಟ್ಟುಕೊಡದೆ ಮಾಯೆಯನ್ನು ಹೀಗೆ ಸ್ವೀಕರಿಸುವುದಕ್ಕೆ ತುಂಬ ಹೃದಯವಂತಿಕೆ

ಅಗತ್ಯ. ೧೮೯೬ರ ಅಕ್ಟೋಬರ್ ೨೭ರಂದು ಲಂಡನ್ನಿನಲ್ಲಿ ಕೊಟ್ಟ 'God in Everything' ಎಂಬ ಉಪನ್ಯಾಸದಲ್ಲಿ ವಿವೇಕಾನಂದರು "ಹೃದಯವೇನೋ ಬಹಳ ಮುಖ್ಯವೇ ಸರಿ. ಜೀವನದಲ್ಲಿ ಅಮೃತ ಸ್ಫೂರ್ತಿಯು ವ್ಯಕ್ತವಾಗುವುದು ಹೃದಯದ ಮೂಲಕ. ನಮ್ಮ ಹೃದಯವು ಶೂನ್ಯವಾಗಿ ಅತಿ ಬುದ್ಧಿ ಇರುವುದಕ್ಕಿಂತಲೂ, ಬುದ್ಧಿಶೂನ್ಯವಾಗಿದ್ದು ಅಲ್ಪ ಸ್ವಲ್ಪ ಹಾರ್ದಿಕತೆ ಇರುವುದು, ನನಗೆ ಸಾವಿರಪಾಲು ಹೆಚ್ಚು ಪ್ರಿಯವಾದುದು. ಯಾರಿಗೆ ಹೃದಯವಿದೆಯೋ ಅವರಿಗೆ ಜೀವನ ಸಾಧ್ಯ, ಬೆಳವಣಿಗೆ ಸಾಧ್ಯ. ಆದರೆ ಯಾರಿಗೆ ಹೃದಯವೇ ಇಲ್ಲವೋ, ಯಾರು ಬರಿಯ ಬುದ್ಧಿವಂತರಾಗಿ ಶೂನ್ಯಹೃದಯದವರಾಗಿರುವರೋ ಅವರಿಗೆ ಜೀವನವು ಶೂನ್ಯವಾಗಿ ಅವರು ಸಾಯುತ್ತಾರೆ" ಎಂದಿದ್ದಾರೆ. ಮಾಯಾಪ್ರಪಂಚದಲ್ಲಿಯೂ ದೇವರಿದ್ದಾನೆ ಎನ್ನುವ ಅವರು, ಭಕ್ತಿ–ಜ್ಞಾನಗಳನ್ನಿಟ್ಟುಕೊಂಡೂ ಸದಾ ಕಾರ್ಯಶೀಲನಾಗಿರುವಂತೆ ಬಾಳಬೇಕೆಂದು ಇದೇ ಉಪನ್ಯಾಸದಲ್ಲಿ ಕರೆ ಕೊಡುತ್ತಾರೆ: "ದೇವರನ್ನು ಎಲ್ಲೆಲ್ಲಿಯೂ ಕಂಡುಕೊಂಡು, ಅವನೇ ಸರ್ವಸ್ವ ಎಂದು ಭಾವಿಸಿ ಕೆಲಸಮಾಡಿ ಎನ್ನುವುದು ವೇದಾಂತ. ಜೀವನವನ್ನು ಪವಿತ್ರಗೊಳಿಸಿ; ಅದೇ ದೇವರು ಎಂಬಂತೆ ನೋಡಿ; ಬಿಡುವಿಲ್ಲದೆ ಕೆಲಸ ಮಾಡಿ. ನಾವು ಮಾಡಬೇಕಾದುದಿಷ್ಟೆ, ಕೇಳಬೇಕಾದುದಿಷ್ಟೆ ಎಂದು ತಿಳಿಯಿರಿ. ದೇವರೇ ಸರ್ವಸ್ವ, ಅವನನ್ನರಸಲು ಮತ್ತೆಲ್ಲಿ ಹೋಗಬೇಕು? ಅವನಾಗಲೇ ಪ್ರತಿಯೊಂದು ಕ್ರಿಯೆಯಲ್ಲಿಯೂ ಆಲೋಚನೆಯಲ್ಲಿಯೂ ಭಾವನೆಯಲ್ಲಿಯೂ ಇರುವನು. ಈ ದೃಷ್ಟಿಯಿಂದ ಕೆಲಸ ಮಾಡಬೇಕು." ಶಂಕರಾಚಾರ್ಯರಿಗೆ ಪರಬ್ರಹ್ಮವೆಂಬುದು ಒಂದು ಅತೀತ ತತ್ತ್ವವಾದರೆ, ವಿವೇಕಾನಂದರ ಪಾಲಿಗೆ ಇರುವ ಒಬ್ಬನೇ ದೇವರು ಸರ್ವವ್ಯಾಪಿಯಾಗುತ್ತಾನೆ, ಕರ್ಮ ಭಕ್ತಿ ಜ್ಞಾನಗಳೆಲ್ಲಕ್ಕೂ ಗಮ್ಯನಾಗುತ್ತಾನೆ.

ಆದ್ದರಿಂದ, ವಿವೇಕಾನಂದರು ಜನಸಾಮಾನ್ಯರಿಗೆ ಸ್ವೀಕಾರಾರ್ಹವಾಗುವಂತೆ ಅದ್ವೈತವನ್ನು ಮಾನವೀಯ ನೆಲೆಗಟ್ಟಿನ ಮೇಲೆ ತಂದು ನಿಲ್ಲಿಸಿ, ಅದಕ್ಕೆ ಹೊಸ ಜೀವವನ್ನು ಕೊಡುತ್ತಾರೆ. "ಶಂಕರರು ಅದ್ವೈತವೇದಾಂತವನ್ನು ಅರಣ್ಯ ಗಿರಿಕಂದರಗಳಲ್ಲಿ ಬಿಟ್ಟಿದ್ದರು; ನಾನು ಅದನ್ನು ಅನುದಿನದ ಕೆಲಸ ನಡೆಯುವ ಪ್ರಪಂಚದಲ್ಲಿ, ಸಮಾಜದಲ್ಲಿ ಸರ್ವಗ್ರಾಹ್ಯವಾಗುವಂತೆ ತುಂತುರಿಸುವುದಕ್ಕಾಗಿ ಬಂದಿರುವೆನು" ಎನ್ನುವ ಸ್ವಾಮಿ ವಿವೇಕಾನಂದರು, ಲಂಡನ್ನಿನಲ್ಲಿ ೧೮೯೬ರ ನವೆಂಬರ್‌ನಲ್ಲಿ ತಮ್ಮ ಹೊಸ ಅದ್ವೈತದ ರೂಪವಾದ 'Practical Vedanta'ದ ಬಗ್ಗೆಯೇ ನಾಲ್ಕು ಉಪನ್ಯಾಸಗಳನ್ನು ಕೊಟ್ಟಿದ್ದಾರೆ. ಈ ಉಪನ್ಯಾಸಗಳಲ್ಲಿನ ಮುಖ್ಯಕಲ್ಪನೆ, ಅವರೇ ಹೇಳಿದಂತೆ, "ಧಾರ್ಮಿಕ ಆದರ್ಶಗಳು ನಮ್ಮ ಇಡೀ ಜೀವನವನ್ನು ಒಳಗೊಳ್ಳಬೇಕು, ನಮ್ಮೆಲ್ಲ ಚಿಂತನೆಗಳಲ್ಲಿ ಹಾಸುಹೊಕ್ಕಾಗಬೇಕು, ಹೆಚ್ಚುಹೆಚ್ಚಾಗಿ ಅನುಷ್ಠಾನಕ್ಕೆ ಬರಬೇಕು." ಅದ್ವೈತವು ಅನುಷ್ಠಾನಕ್ಕೆ ಇಳಿದಾಗ, "ನಿರಾಕಾರವು ಸಾಕಾರವನ್ನು ತಿರಸ್ಕರಿಸುವ ಬದಲಾಗಿ, ನಿರಪೇಕ್ಷವು ಸಾಪೇಕ್ಷವನ್ನು ಕೀಳುಗಳೆಯುವ ಬದಲಾಗಿ, ನಮ್ಮ ಹೃದಯ–ಬುದ್ಧಿಗಳಿಗೆ ಸಂಪೂರ್ಣ ತೃಪ್ತಿಯಾಗುವಂತೆ ಅವುಗಳನ್ನು ವಿವರಿಸುತ್ತವೆ."

ಈ ತಮ್ಮ ಹೊಸ ವೇದಾಂತಕ್ಕೆ, ಹೊಸ ಅದ್ವೈತಕ್ಕೆ ವಿವೇಕಾನಂದರು ಬಂದು ತಲುಪಿದ್ದಾದರೂ ಹೇಗೆ? ಅವರಿಗೆ ತಮ್ಮ ಗುರು ಶ್ರೀರಾಮಕೃಷ್ಣರ ಜೀವನ ಹಾಗೂ ಸಂದೇಶಗಳೇ ವೇದಾಂತದ ಅಧಿಕೃತ ಪಾಠಗಳಾಗಿದ್ದವು. ನಿರ್ವಿಕಲ್ಪ ಸಮಾಧಿಯನ್ನು ಸಾಧಿಸಿದರೂ ಸಹ, ಶ್ರೀರಾಮಕೃಷ್ಣರು ಅಲ್ಲಿಯೇ ನೆಲೆಗೊಂಡವರಲ್ಲ, ಅದ್ವೈತಪಂಥಕ್ಕೆ ಅಂಟಿಕೊಂಡವರಲ್ಲ. ನಮ್ಮ ಶತಶತಮಾನಗಳ ಎಲ್ಲ ಬಗೆಯ ಆಧ್ಯಾತ್ಮಿಕ ಸಂಪ್ರದಾಯಗಳೂ ಅವರ ಅನುಭವದ ಮೂಸೆಯಲ್ಲಿ ಹರಳುಗಟ್ಟಿದ್ದವು. ಈ ಅನುಭವ ಅನುಭಾವಗಳೇ ಅವರ ಮಾತಿಗೆ ಶಕ್ತಿಯನ್ನು ಕೊಟ್ಟಿರುವುದು.

ಶ್ರೀರಾಮಕೃಷ್ಣರು ಮೆಚ್ಚುತ್ತಿದ್ದ, ಹಾಡುತ್ತಿದ್ದ ಸುಮಾರು ಮುನ್ನೂರೈವತ್ತು ಹಾಡುಗಳಿವೆ. ಭಗವಂತನೊಡನೆ ಐಕ್ಯವನ್ನೇ ಪ್ರಾರ್ಥಿಸಲಿ, ಅದ್ವೈತಸ್ಥಿತಿಗಾಗಿಯೇ ಹಂಬಲಿಸಲಿ, ಹಾಡೆಂದರೆ ಭಕ್ತಿಯ ಅಭಿವ್ಯಕ್ತಿ. ಈ ಹಾಡುಗಳು ವೈವಿಧ್ಯಮಯ ಆಧ್ಯಾತ್ಮಿಕ ಅನುಭವಗಳ ಆಗರವಾಗಿವೆ. ಹೃದಯದ ಬಾಗಿಲನ್ನು ಸೌಂದರ್ಯಾನುಭೂತಿಗಾಗಿ ತೆರೆದಿಡುವ ಭಕ್ತಿಯ ಮೂಲಕ ಅದ್ವೈತಸ್ಥಿತಿಯನ್ನು ತಲುಪುವುದು ಸಾಧ್ಯ ಎಂದು ರಾಮಕೃಷ್ಣ–ವಿವೇಕಾನಂದರಿಬ್ಬರೂ ನಂಬಿದ್ದರು.

ದ್ವೈತವನ್ನು ಬಿಟ್ಟು ಎಲ್ಲಿಗೆ ಓಡುವಿರಿ? ದ್ವೈತದ ಮೂಲಕವೇ ಅದ್ವೈತವನ್ನು ಸಾಧಿಸಬೇಕು ಎಂಬುದು ವಿವೇಕಾನಂದರ ತರ್ಕ. ಅವರು ಅದ್ವೈತ ಮಾತ್ರವೇ ವೇದಾಂತವಲ್ಲ ಎಂದುದೂ ಈ ಕಾರಣಕ್ಕೇ. ಶ್ರೀರಾಮಕೃಷ್ಣರ ಪಾಲಿಗೆ ತಾವು ಪೂಜಿಸುವ ತಾಯಿ ಬ್ರಹ್ಮನಿಗಿಂತ ಬೇರೆಯಲ್ಲ. ಹಾಡೊಂದರಲ್ಲಿ ಅವರು ತಾಯಿಯನ್ನು **'ಶೂನ್ಯರೂಪ ಶಶಿಭಾಲಿ'** ಎನ್ನುತ್ತಾರೆ. ಇಲ್ಲಿ ಶೂನ್ಯವೂ ಒಂದು ರೂಪ, ಆಕಾಶದಲ್ಲಿ ಚಂದ್ರನು ಹಣೆಗಿಟ್ಟ ಬೊಟ್ಟಿನಂತೆ ಇರುವ ಹಾಗೆ. ಶೂನ್ಯವೂ ಸಹ ದೇವರ ಅನಂತ ಅಭಿವ್ಯಕ್ತಿಗಳ ಪೈಕಿ ಒಂದು ಅಭಿವ್ಯಕ್ತಿ, ಒಂದು ಮುಚ್ಚಿಗೆ! ಶಾಕ್ತ ಕವಿ ಕಮಲಾಕಾಂತನು ತಾಯಿ ಕೆಲವೊಮ್ಮೆ ಬಿಳಿ, ಕೆಲವೊಮ್ಮೆ ಹಳದಿ, ಕೆಲವೊಮ್ಮೆ ನೀಲಿ, ಕೆಲವೊಮ್ಮೆ ಕೆಂಪು, ಕೆಲವೊಮ್ಮೆ ಪುರುಷ, ಕೆಲವೊಮ್ಮೆ ಸ್ತ್ರೀ, ಕೆಲವೊಮ್ಮೆ ಶೂನ್ಯ ಮಹಾಕಾಶ ಎನ್ನುತ್ತಾನೆ. ವಿವೇಕಾನಂದರು ತಮ್ಮ ಬಂಗಾಳಿ ಕವನವೊಂದರಲ್ಲಿ,

**ಮನಸಿನಾಚೆ, ಮಾತಿನಾಚೆ**
**ಶೂನ್ಯ ಶೂನ್ಯದೊಳಳಿವುದು!**
**ಯಾರ ಹೃದಯವು ಅರಿವುದೋ**
**ಅವರೆ ಅದನನಂತವೆಂದರಿವರು!**

ಎನ್ನುತ್ತಾರೆ. ಆದರೆ ಇದು ಅದ್ವೈತ ಸಾಧನೆಯ ಕೊನೆಯ ಹಂತ.

ವಿವೇಕಾನಂದರ ವೇದಾಂತ, ದ್ವೈತಾದ್ವೈತ, ವಿಶಿಷ್ಟಾದ್ವೈತಗಳ ಸಂಶ್ಲೇಷಿತ ಸಂಗಮ; ವಿಶಾಲದೃಷ್ಟಿಯ ಅನುಷ್ಠಾನ ವೇದಾಂತ, ಕೇವಲ ಸಿದ್ಧಾಂತವೇದಾಂತವಲ್ಲ. ಅದ್ವೈತವನ್ನು ಅವರು ಹಳಿಯಲಿಲ್ಲ; ಅದು ಅಧ್ಯಾತ್ಮಸಾಧನೆಯ ಕೊಟ್ಟಕೊನೆಯ ಶಿಖರ ಎಂದರು. ಶ್ರುತಿಗಳು ಅದನ್ನೇ ಹೇಳುತ್ತವೆ ಎಂದು ಅವುಗಳನ್ನು ತಿರುಚಬೇಕಾಗಿಲ್ಲ; ಅವುಗಳಲ್ಲಿ ಜೀವನದ ಎಲ್ಲ ಬಗೆಯ ಸಂಗೀತವೂ ಇದೆ; ಅವು ಇದ್ದಂತೆಯೇ ತೆಗೆದುಕೊಳ್ಳೋಣ ಎಂಬುದು ಅವರ ನಿಲುವು.



# ವಿವೇಕಾನಂದರ ವ್ಯಕ್ತಿತ್ವವಿಕಸನ : ಒಂದು ರೋಚಕ ಕಥೆ

ಡಾ. ಕೆ. ಅನಂತರಾಮು

**ಬಾಲಕ ನರೇಂದ್ರನು ವಿಶ್ವಚೇತನ ವಿವೇಕಾನಂದರಾಗಿ ಬೆಳೆದುನಿಂತ ವೃತ್ತಾಂತ ಅತ್ಯಂತ ರೋಚಕವಾದುದು. ವಿವೇಕಾನಂದರ ವ್ಯಕ್ತಿತ್ವವು ಹೆಮ್ಮರವಾಗಿ ಬೆಳೆದು, ಲಕ್ಷಾಂತರ ಮಂದಿಗೆ ನೆಮ್ಮದಿಯ ನೆರಳನ್ನು ನೀಡಿತು. ಈ ಪಾವನಕಥೆಯ ಹಲವು ಮಜಲುಗಳ ಮನಮೋಹಕ ಪಕ್ಷಿನೋಟವನ್ನು ಮಾಡಿಕೊಟ್ಟಿರುವ ಲೇಖಕರು ನಿವೃತ್ತ ಕನ್ನಡ ಪ್ರಾಧ್ಯಾಪಕರು. ಪ್ರಸಿದ್ಧ ವಾಗ್ಮಿಗಳೂ, ಸಹೃದಯಸಂಪನ್ನರೂ ಆದ ಇವರು ವಿವೇಕಪ್ರಭದೊಡನೆ, ತಮ್ಮ ಸರಣಿಲೇಖನಗಳ ಮೂಲಕ ಅವಿನಾಭಾವ ಸಂಬಂಧವನ್ನು ಹೊಂದಿದ್ದಾರೆ.**

ನರಜನ್ಮವನ್ನು ಪಡೆಯುವುದು, ಹಾಗೆ ಪಡೆದ ಬಳಿಕ ಸಾಧನೆ ಮಾಡಿ ಮೋಕ್ಷಕ್ಕಾಗಿ ಹಂಬಲಿಸುವುದು, ಆ ಹಂಬಲಕ್ಕೆ ಬೆಂಬಲವಾಗಿ ಸದ್ಗುರುವೊಬ್ಬನ ಆಸರೆಯು ಲಭಿಸುವುದು– ಈ ಮೂರೂ ದುರ್ಲಭವಾದ ಸಂಗತಿಗಳೆಂದೂ, ದೈವಾನುಗ್ರಹವಿದ್ದರೆ ಮಾತ್ರವೇ ಕೂಡಿಬರುತ್ತವೆಯೆಂದೂ ಆದಿಶಂಕರರು ತಮ್ಮ 'ವಿವೇಕ ಚೂಡಾಮಣಿ'ಯಲ್ಲಿ ಬರೆದಿದ್ದಾರೆ.

ಸ್ವಾಮಿ ವಿವೇಕಾನಂದರ ವಿಷಯದಲ್ಲಿ ಈ ಮೂರೂ ಸಾರ್ಥಕವಾಗಿ ಕೂಡಿಬಂದಿದ್ದುವು. ಪರಮಾತ್ಮನ ವಿಭೂತಿಸ್ವರೂಪರಾಗಿ ಅವತರಿಸಿ, 'ಆತ್ಮನೋ ಮೋಕ್ಷಾರ್ಥಂ

ಜಗದ್ಧಿತಾಯ ಚ' ಎಂಬ ವಾಣಿಯಂತೆ ಆತ್ಮಸಾಕ್ಷಾತ್ಕಾರದ ಜೊತೆಗೆ ಲೋಕಹಿತವನ್ನೂ ಸಾಧಿಸಬೇಕೆಂದು ಸಂಕಲ್ಪಿಸಿ, ಶ್ರೀರಾಮಕೃಷ್ಣ ಪರಮಹಂಸರಂತಹ ಮಹಾತ್ಮರನ್ನು ಶ್ರೀಗುರುವಾಗಿ ಪಡೆದುಕೊಂಡು ಕೃತಕೃತ್ಯರಾದರು.

## ಅಮೃತತ್ತ್ವವನ್ನು ಬಯಸುವ ಧೀರ

ಯಾವುದನ್ನು ಕಂಡಾಗ ಹೃದಯಕ್ಕೆ 'ಆಹಾ' ಎಂದೆನಿಸುತ್ತದೆಯೋ ಅಲ್ಲಿ ಪರಮಾತ್ಮನ ತೇಜಸ್ಸಿನ ಸತ್ವದಿಂದ ಅವತರಿಸಿದ ವಿಭೂತಿಯಿರುತ್ತದೆ ಎಂದು ತಿಳಿಯಬೇಕು. ವಿವೇಕಾನಂದರ ವ್ಯಕ್ತಿತ್ವದ ಹಾಸುಬೀಸುಗಳನ್ನೂ, ವೈಭವವಿಶೇಷಗಳನ್ನೂ ಕಂಡಾಗ 'ಆಹಾ' ಎನ್ನದಿರುವುದು ಸಾಧ್ಯವೇ ಇಲ್ಲ. ಪರಮಾತ್ಮನ ವಿಭೂತಿಯೇ ವಿವೇಕಾನಂದಸ್ವರೂಪಿಯಾಗಿ ಅವತರಿಸಿತು ಎಂದೇ ಹೇಳಬೇಕು. ಅವರ ವ್ಯಕ್ತಿವಿಕಾಸದ ಮಜಲುಗಳೆಲ್ಲವೂ ಅಧ್ಯಾತ್ಮಮುಖಿಯಾಗಿ, ಸಮಾಜಸೇವಾಮುಖಿಯಾಗಿಯೇ ಸಾಗಿವೆ. ಅವರೊಬ್ಬ ಧೀರಸಂನ್ಯಾಸಿ. ಸೃಷ್ಟಿಕರ್ತನು ನಮ್ಮ ಇಂದ್ರಿಯಗಳನ್ನೆಲ್ಲ ಹೊರಮುಖವಾಗಿ ಕೊರೆದಿಟ್ಟಿರುವುದರಿಂದ, ಹೊರಗೆ ನೋಡುವುದೇ ನಮಗೆ ಅಭ್ಯಾಸವಾಗಿಬಿಟ್ಟಿದೆ. ನಮ್ಮೊಳಗನ್ನು ನೋಡಿಕೊಳ್ಳುವ ಪರಿಪಾಠವೇ ಇಲ್ಲ. ಆದರೆ ಯಾರೋ 'ಧೀರ'ನೊಬ್ಬನು ಮಾತ್ರ ಅಮೃತತ್ತ್ವವನ್ನು ಬಯಸುವವನಾಗಿ, ತನ್ನ ಹೊರಗಣ್ಣನ್ನು ಒಳಮುಖನಾಗಿಸಿಕೊಂಡು, ತನ್ನ ಅಂತರಾತ್ಮವನ್ನು ನೋಡುತ್ತಾನೆಂದು 'ಕಠೋಪನಿಷತ್ತು' ಹೇಳಿದೆ. ಅಂತಹ ಧೀರ ಪುರುಷಪುಂಗವರ ಪಂಕ್ತಿಗೆ ವಿವೇಕಾನಂದರು ಸೇರುತ್ತಾರೆ. ಅಧ್ಯಾತ್ಮಸಾಧನೆಯ ಮಾರ್ಗವೆಂಬುದು ಹರಿತವಾದ ಕತ್ತಿಯ ಅಲಗಿನಮೇಲೆ ನಡೆದಂತೆ ಅತ್ಯಂತ ದುರ್ಗಮವಾದುದು. ಕಾರಣಿಕ ವ್ಯಕ್ತಿತ್ವಗಳು ಮಾತ್ರವೇ ಆ ಹಾದಿಯಲ್ಲಿ ಸಾಗಿ, ಆತ್ಮಸಾಕ್ಷಾತ್ಕಾರ ಪಡೆದುಕೊಳ್ಳುತ್ತವೆ. ವಿವೇಕಾನಂದರು ಅಂತಹ ಜಾಗೃತ ಚೇತನ. ಅನಿಕೇತನರಾದ ಅವರು ತಮ್ಮ ಪಯಣದ ಹಾದಿಯಲ್ಲಿ ಎಲ್ಲಿಯೂ ನಿಲ್ಲಲಿಲ್ಲ, ಎಲ್ಲಿಯೂ ವಿಶ್ರಮಿಸಿಕೊಳ್ಳಲಿಲ್ಲ, ಎಲ್ಲಿಯೂ ಗುರಿತಪ್ಪಲಿಲ್ಲ, ಪರಮಹಂಸಗುರುಗಳು ತಾವು ಬೆಲ್ಲವಾಗಿ ಉಳಿದು ಶಿಷ್ಯನನ್ನು ಸಕ್ಕರೆಯಾಗಿಸಿಬಿಟ್ಟರು. 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬ ಸೂಕ್ತಿಯಂತೆ ಅವರು ತಮ್ಮ ಶಿಷ್ಯನು ತಮ್ಮನ್ನು ಮೀರಿ ಬೆಳೆದುದನ್ನು ಕಂಡು ಆನಂದಾತಿರೇಕದಲ್ಲಿ ಮೈಮರೆತುಬಿಟ್ಟರು.

## ಕಾಶಿಯ ವೀರೇಶ್ವರನ ವರಪುತ್ರ

ಸ್ವಾಮಿ ವಿವೇಕಾನಂದರು ೧೮೬೩ನೆಯ ಜನವರಿ ೧೨ನೆಯ ತಾರೀಖು ಕೊಲ್ಕೊತಾದ ವಿಶ್ವನಾಥದತ್ತ ಮತ್ತು ಭುವನೇಶ್ವರಿದೇವಿ ಎಂಬ ಪಾವನದಂಪತಿಗಳ ಉದರದಲ್ಲಿ ಜನಿಸಿದರು. ಅದರ ಫಲವಾಗಿ ಶ್ರೀರಾಮಕೃಷ್ಣ ಪರಮಹಂಸರು ಸಪ್ತರ್ಷಿಮಂಡಲದಿಂದ ತೇಜಸ್ಸಿನ ಒಂದು ಅಂಶವು ಭೂಮಿಗೆ ಇಳಿದುಬಂದ ದಿವ್ಯಕಾಣ್ಕೆಯನ್ನು ಕಂಡರು. "ನಮಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ, ಒಂದು ಗಂಡುಮಗುವನ್ನು ಕರುಣಿಸು ತಂದೆ" ಎಂದು ಆ ದಂಪತಿಗಳು ತಮ್ಮ ಮನೆದೇವರಾದ ಕಾಶಿಯ ವೀರೇಶ್ವರನನ್ನು ಬೇಡಿಕೊಂಡುದರ ಫಲವಾಗಿ ವಿವೇಕಾನಂದರ ಅವತಾರವಾಯಿತು. ಅದರಿಂದಾಗಿ ಮೊದಲಿಗೆ ವೀರೇಶ ಎಂದೇ ಕರೆದರು. ಆಮೇಲೆ ನರೇಂದ್ರನೆಂದು ನಾಮಕರಣಮಾಡಿದರು. ಸಂನ್ಯಾಸವನ್ನು ಸ್ವೀಕರಿಸಿದ ಬಳಿಕ ವಿವೇಕಾನಂದರೆನಿಸಿದರು. ಎಲ್ಲವೂ ಸಾರ್ಥಕವಾದ ಹೆಸರುಗಳೇ. ಉಪನಿಷತ್ತುಗಳಲ್ಲಿ ನಿರೂಪಿತವಾದ 'ಧೀರ'ನ ರಹಸ್ಯ 'ವೀರೇಶ'ನಾಮದಲ್ಲಿಯೂ, ಅಧ್ಯಾತ್ಮಜಗತ್ತಿನ ಸಾರ್ವಭೌಮರಾಗಿ ಮೆರೆಯುವವರೆಂಬ ರಹಸ್ಯ 'ನರೇಂದ್ರ' ನಾಮದಲ್ಲಿಯೂ, ಆತ್ಮೋದ್ಧಾರ ಲೋಕೋದ್ಧಾರಗಳ ಸಂಯುಕ್ತಸಾಧನೆಯ ವಿವೇಕವೇ ಪರಮಾನಂದದ ಹಾದಿಯೆಂಬ ರಹಸ್ಯ 'ವಿವೇಕಾನಂದ' ನಾಮದಲ್ಲಿಯೂ ಅಡಗಿಕುಳಿತಿವೆ.

## ಸಾಕುಸಾಕಪ್ಪಾ ಈ ಹುಡುಗನ ಸಹವಾಸ

ಬದುಕಿನ ಶ್ರೇಷ್ಠಮೌಲ್ಯಗಳಿಗೆ ಒಡ್ಡಿಕೊಂಡು, ಅವುಗಳ ಪರಿಪಾಕದಲ್ಲಿ ಬೆಳೆಯುತ್ತ ಸಾಗುವುದನ್ನೇ ವ್ಯಕ್ತಿತ್ವವಿಕಸನವೆನ್ನುತ್ತೇವೆ. ವಿವೇಕಾನಂದರೊಬ್ಬ ಮಹಾಪುರುಷರಾಗಿ ಮೇಲೇರುತ್ತಾರೆಂಬುದರ ಗುರುತುಗಳು ಬಾಲ್ಯದಲ್ಲಿಯೇ ಗೊತ್ತಾಗಿಬಿಟ್ಟಿದ್ದುವು. ಏನು ಚೆಲ್ಲಾಟ, ಏನು ತುಂಟಾಟ ! ನಿಂತಲ್ಲಿ ನಿಲ್ಲುವಂತಿಲ್ಲ, ಕುಳಿತಲ್ಲಿ ಕೂರುವಂತಿಲ್ಲ, ಬುದ್ಧಿಯೋ ಪಾದರಸದ ಹಾಗೆ. ತಾಯಿಯನ್ನೂ ಅಕ್ಕಂದಿರನ್ನೂ, "ಸಾಕುಸಾಕಪ್ಪಾ ಈ ಹುಡುಗನ ಸಹವಾಸ" ಎನ್ನುವಂತೆ ಗೋಳುಗುಟ್ಟಿಸಿಬಿಡುತ್ತಿದ್ದರು. ಬೇಸತ್ತ ಭುವನೇಶ್ವರಿದೇವಿಯು ಕಾಶಿಯ ವೀರೇಶ್ವರನನ್ನು ಕುರಿತು, ನನಗೊಬ್ಬ ಮಗನನ್ನು ಕೊಡು ಎಂದು ಬೇಡಿದರೆ, ಮಧ್ಯೆ ಒಂದು ಸೊನ್ನೆ ಸೇರಿಸಿ ಕೊಟ್ಟುಬಿಡುವುದೇ ಎಂದು ಅಲವತ್ತುಕೊಳ್ಳುತ್ತಿದ್ದಳು. ರಾಮಾಯಣ–ಮಹಾಭಾರತಗಳ ಕಥಾಸಾರವನ್ನು ತಾಯಿಯಿಂದ ಕೇಳಿ ತಿಳಿದುಕೊಂಡು ಅಲ್ಲಿನ ಶ್ರೇಷ್ಠ ಪಾತ್ರಗಳನ್ನು ಆಗಲೇ ತಮ್ಮದಾಗಿಸಿಕೊಂಡುಬಿಟ್ಟಿದ್ದರು. ಅವರ ತ್ಯಾಗಬುದ್ಧಿಯಾದರೋ ಬಾಲ್ಯದಲ್ಲಿಯೇ ಕುಡಿಯೊಡೆದಿತ್ತು. ಸಾಧುಸಂತರು ಮನೆಗೆ ಬಂದಾಗ ಗೃಹೋಪಯೋಗಕ್ಕಿದ್ದ ಕೆಲವು ಬೆಲೆಬಾಳುವ ವಸ್ತುಗಳನ್ನೇ ಅವರ ಮಡಿಲಿಗೆ ಹಾಕಿಬಿಡುತ್ತಿದ್ದರು. ಕೊಠಡಿಯಲ್ಲಿ ಕೂಡಿಹಾಕಿದರೂ ಆ ಸಾಧುಸಂನ್ಯಾಸಿಗಳು ನಿರ್ಗಮಿಸುವಾಗ ಕಿಟಕಿಯಿಂದಲೇ, ಆ ಕೊಠಡಿಯ ಯಾವುದಾದರೂ ವಸ್ತುಗಳನ್ನು, "ಇದನ್ನು ತೆಗೆದುಕೊಂಡುಹೋಗಿ, ಬಾಬಾ" ಎಂದು ಅವರತ್ತ ತೂರಿಬಿಡುತ್ತಿದ್ದರು.

## ನಾನೊಬ್ಬ ಇಂದ್ರಜಾಲಿಗನೆಂಬುದನ್ನು ಅರಿಯೆಯಾ

ವಿವೇಕಾನಂದರ ವ್ಯಕ್ತಿತ್ವದ ಹಲವು ಗುಣಗಳು ಅವರ ಬಾಲ್ಯದಲ್ಲಿಯೇ ಮೊಗ್ಗಾಗಿ ಮೂಡಿಕೊಂಡಿದ್ದುವು. ಹಸು, ಕೋತಿ, ಆಡು, ನವಿಲು, ಪಾರಿವಾಳ ಮುಂತಾದುವನ್ನು ಮುದ್ದಿನಿಂದ ಸಾಕುತ್ತಿದ್ದರು. ಆ ಪ್ರೀತಿಪ್ರೇಮಗಳು ಮುಂದೆ ಇಡೀ ಮಾನವ ಕುಲವನ್ನೇ ತಮ್ಮ ಆದರಣೆಯ ತೆಕ್ಕೆಗೆ ತೆಗೆದುಕೊಳ್ಳುವ, "ಉದಾರ ದೃಷ್ಟಿಯುಳ್ಳವರು ಇಡೀ ಜಗತ್ತನ್ನೇ ತಮ್ಮ ಕುಟುಂಬವೆಂದು ಭಾವಿಸುತ್ತಾರೆ" ಎನ್ನುವಮಟ್ಟಿಗೆ ಅರಳಿಕೊಂಡಿತು. ರುಚಿರುಚಿಯಾಗಿ ಅಡಿಗೆಮಾಡಬೇಕೇ, ಕತ್ತಿವರಸೆ, ದೊಣ್ಣೆವರಸೆಗಳನ್ನು ತೋರಿಸಬೇಕೇ, ಕುಸ್ತಿಯ ಪಟ್ಟುಗಳನ್ನು ಹಾಕಬೇಕೇ, ಗಾಯಗೊಂಡವರಿಗೆ ಶೈತ್ಯೋಪಚಾರಾದಿಗಳನ್ನು ಮಾಡಬೇಕೇ– ಎಲ್ಲದರಲ್ಲೂ ಅವರು ಅಗ್ರಗಣ್ಯರಾಗಿದ್ದರು. ಹನ್ನೊಂದುವರ್ಷದವರಾಗಿದ್ದಾಗಲೇ ಅವರ ವ್ಯುತ್ಪನ್ನಮತಿತ್ವ ಬೆರಗುಗೊಳಿಸುವಂತಿತ್ತು. ಒಮ್ಮೆ ಯುದ್ಧದ ಹಡಗೊಂದನ್ನು ನೋಡಲು ಪಾಸ್ ತೆಗೆದುಕೊಳ್ಳಲು ಹೋಗಿದ್ದಾಗ, "ನೀನಿನ್ನೂ ಚಿಕ್ಕವನು, ಒಳಕ್ಕೆ ಹೋಗಲಾಗದು" ಎಂದು ಬಾಗಿಲು ಕಾಯುವವನು ತಡೆದುಬಿಟ್ಟನು. ಆಗ ವಿವೇಕಾನಂದರು ನಿರಾಶರಾಗದೆ ಆ ಕಛೇರಿಯನ್ನು ಪ್ರದಕ್ಷಿಣೆಹಾಕುತ್ತ, ದ್ವಾರಪಾಲಕನಿಲ್ಲದ ಹಿಂಬಾಗಿಲಿನಿಂದ ಆ ಆಫೀಸಿನ ಮಹಡಿಯನ್ನೇರಿ ಪಾಸ್ ಪಡೆದುಕೊಂಡರು. ಕಾವಲಿನವನು, "ನೀನು ನನ್ನ ಕಣ್ಣುತಪ್ಪಿಸಿದ್ದಾದರೂ ಹೇಗೆ" ಎಂದು ಕೇಳಿದ್ದಕ್ಕೆ, "ನಾನೊಬ್ಬ ಇಂದ್ರಜಾಲಿಗನೆಂಬುದನ್ನು ನೀನು ಅರಿಯೆಯಾ" ಎಂದು ಹೇಗೋ ದಕ್ಕಿಸಿಕೊಂಡುಬಿಟ್ಟರು.

## ಗುರುಮನೆಯ ಮಹಾರಾಜ

ಮೈಮನಸ್ಸುಗಳ ಒಕ್ಕೂಟವನ್ನು ಏಕಾಗ್ರತೆಯೆನ್ನುತ್ತೇವೆ. ಐದುವರ್ಷದ ಬಾಲ್ಯದಲ್ಲಿಯೇ ಅಪೂರ್ವವಾದ ಏಕಾಗ್ರತೆ ವಿವೇಕಾನಂದರಿಗೆ ಸಿದ್ಧಿಸಿತ್ತು. ಶ್ರೀರಾಮದೇವರ ಮುಂದೆಯೋ ಶಿವನ ಮುಂದೆಯೋ ಧ್ಯಾನಕ್ಕೆ ಕುಳಿತರೆಂದರೆ ಜಗತ್ತನ್ನೇ ಮರೆತುಬಿಡುತ್ತಿದ್ದರು. ಒಮ್ಮೆ ನಾಗರಹಾವೇ ಹತ್ತಿರದಲ್ಲಿ ಹರಿದುಹೋದರೂ, ಗೆಳೆಯರು ಕೂಗಿಹೇಳಿದರೂ, ಅವರು ಬಹಿರ್ಮುಖರಾಗಲಿಲ್ಲ, ಇನ್ನೊಮ್ಮೆ ಕಂಬಳಿ ಹೊದ್ದುಕೊಂಡಿದ್ದಾರೆನ್ನುವಷ್ಟು ದಟ್ಟವಾಗಿ ಸೊಳ್ಳೆಗಳು ಮುತ್ತಿಕೊಂಡಿದ್ದರೂ ಅವರು ಧ್ಯಾನಮಗ್ನರಾಗಿಯೇ ಇದ್ದರು. ಮುಂದೆ ದೊಡ್ಡವರಾದಮೇಲೆ ಒಂದುದಿನ, ಎಂದೂ ಕೋವಿಯನ್ನು ಬಳಸದಿದ್ದವರು, ನೀರಿನಲ್ಲಿ ತೇಲಿಹೋಗುತ್ತಿದ್ದ ಕೋಳಿಮೊಟ್ಟೆಯ ಚಿಪ್ಪುಗಳಿಗೆ ಗುರಿಯಿಟ್ಟು ಹೊಡೆದು, ಅದರ ಸಾಧನೆಯಲ್ಲಿ ತೊಡಗಿದ್ದ ಯುವಕರನ್ನು ಮಂತ್ರಮುಗ್ಧರನ್ನಾಗಿಸಿಬಿಟ್ಟರು.

ಶಾಲೆಯಲ್ಲಿಯೂ ವಿವೇಕಾನಂದರೇ ನಾಯಕಮಣಿಯಾಗಿರುತ್ತಿದ್ದರು. ಸ್ಮರಣಶಕ್ತಿಯಲ್ಲಾಗಲಿ, ಓದಿನಲ್ಲಾಗಲಿ, ಕ್ರೀಡೆಗಳಲ್ಲಾಗಲಿ ಅವರನ್ನು ಯಾರೂ ಮೀರಿಸುವುದು ಸಾಧ್ಯವಿರಲಿಲ್ಲ. ಕೆಲವು ಹೊಸಹೊಸ ಆಟಗಳನ್ನು ಅವರು ತಾವೇ ಹುಟ್ಟುಹಾಕುತ್ತಿದ್ದರು. ಅಂತಹವುಗಳಲ್ಲಿ ರಾಜನಾಗಿ ಸಿಂಹಾಸನದಮೇಲೆ ಕುಳಿತು ದರ್ಬಾರು ನಡೆಸುವ ಆಟವೊಂದು ಪ್ರಮುಖವಾಗಿತ್ತು. ಅದಕ್ಕೆ ತಕ್ಕಂತೆ ಮುಂದಕ್ಕೆ ಅವರು ಅರಮನೆಯ ಮಹಾರಾಜರನ್ನು ಮೀರಿಸುವಂತೆ ಗುರುಮನೆಯ ಮಹಾರಾಜರಾದರು.

## ನಿರ್ಭಯತೆಗೆ ಮತ್ತೊಂದು ಹೆಸರು

ವಿವೇಕಾನಂದರು ತಮ್ಮ ಗೆಳೆಯರೊಬ್ಬರ ಮನೆಯಂಗಳದ ಮರವೇರಿ, ಲಾಗಹಾಕುವ ಅಪಾಯದ ಚಮತ್ಕಾರಗಳನ್ನು ಆಗಾಗ ಮೆರೆಯುತ್ತಿದ್ದರು. ಅದನ್ನು ತಡೆಯಲೆಂದು ಹಿರಿಯರೊಬ್ಬರು ಬೇಕೆಂತಲೇ, "ಯಾರೂ ಆ ಮರವನ್ನು ಹತ್ತಬೇಡಿ, ಅದರಮೇಲೊಂದು ಬ್ರಹ್ಮರಾಕ್ಷಸವಿದೆ, ನಿಮ್ಮ ಕತ್ತನ್ನು ಹಿಸುಕಿಹಾಕುತ್ತದೆ" ಎಂದು ಭಯಪಡಿಸಿದರು. ಆದರೂ ವಿವೇಕಾನಂದರು ಜಗ್ಗಲಿಲ್ಲ. "ನಿನಗೆ ಬ್ರಹ್ಮರಾಕ್ಷಸನ ಭಯವಿಲ್ಲವೇ" ಎಂದು ಗೆಳೆಯರು ಕೇಳಿದ್ದಕ್ಕೆ, ವಿವೇಕಾನಂದರು "ಒಂದುವೇಳೆ ಇದ್ದಿದ್ದರೆ ಇಷ್ಟುಹೊತ್ತಿಗಾಗಲೇ ಅದು ನನ್ನ ಕತ್ತನ್ನು ಹಿಸುಕಿಹಾಕಿಬಿಡಬೇಕಾಗಿತ್ತಲ್ಲವೇ" ಎಂದು ಉತ್ತರಿಸಿದರು. ಮುಂದೆ ಕಾಶಿಪಟ್ಟಣದಲ್ಲಿ ಅವರ ಕಾವಿಯನ್ನು ಕಂಡು ಬೆನ್ನಟ್ಟಿಬಂದ ಕ್ರೂರವಾದ ಕೋತಿಗಳನ್ನು ತಮ್ಮ ತೀಕ್ಷ್ಣವಾದ ದೃಷ್ಟಿಮಾತ್ರದಿಂದಲೇ ಹಿಮ್ಮೆಟ್ಟಿಸಿದ್ದು ಕೂಡ ಅವರ ನಿರ್ಭಯತೆಗೆ ಸಾಕ್ಷಿಯಾದ ಸಂಗತಿಯಾಗಿದೆ.

ಅಧ್ಯಯನಶೀಲತೆಯಲ್ಲಿ ವಿವೇಕಾನಂದರನ್ನು ಸರಿಗಟ್ಟಬಲ್ಲವರು ಅವರ ಸಹಪಾಠಿಗಳಲ್ಲಿ ಬೇರೊಬ್ಬರಿರಲಿಲ್ಲ. ಎಂಟ್ರೆನ್ಸ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ತಮ್ಮ ಮೇಧಾವಿತನವನ್ನು ಪರಿಚಯಿಸಿದ್ದಲ್ಲದೆ, ಕಾಲೇಜು ವ್ಯಾಸಂಗದಲ್ಲಿಯೂ ಗಟ್ಟಿಗರೆನಿಸಿಕೊಂಡು ತಮ್ಮ ಪ್ರಾಧ್ಯಾಪಕರ ಕೊಂಡಾಟಕ್ಕೆ ಪಾತ್ರರಾದರು. ೧೮೮೪ರಲ್ಲಿ ಬಿ.ಎ. ಪದವಿಯನ್ನು ತಮ್ಮದಾಗಿಸಿಕೊಂಡರು. ಆ ಅವಧಿಯಲ್ಲಿಯೇ ಸಂಗೀತರಂಗವನ್ನು ಹೊಕ್ಕು ಹಾಡುವುದೇನು, ವಾದ್ಯಗಳನ್ನು ನುಡಿಸುವುದೇನು– ಎಲ್ಲದರಲ್ಲಿಯೂ ಪ್ರವೀಣರಾಗಿಬಿಟ್ಟರು. ಅವಕಾಶಗಳು ಲಭಿಸಿದಾಗಲೆಲ್ಲ ತಮ್ಮ ಸುಮಧುರ ಕಂಠದಿಂದ ಎಲ್ಲರಿಗೂ ಸಂತೋಷವನ್ನುಂಟುಮಾಡುತ್ತಿದ್ದರು. ತಮ್ಮ ಗೀತಮಾಧುರ್ಯದಿಂದ ವಿವೇಕಾನಂದರು ಪರಮಹಂಸರ ಹೃದಯವನ್ನೂ ಗೆದ್ದುಕೊಂಡರೆಂಬುದನ್ನು ಇಲ್ಲಿಯೇ ಸ್ಮರಿಸಬೇಕು.

## ದೇವರನ್ನು ಕಾಣುವ ಹಂಬಲ

ಪ್ರೌಢಾವಸ್ಥೆಗೆ ಬರುತ್ತಿದ್ದಂತೆ ವಿವೇಕಾನಂದರು ತಮ್ಮ ವ್ಯಕ್ತಿತ್ವದಲ್ಲಿಯೂ ಉನ್ನತಿಕೆಯನ್ನು ಮೆರೆದುಬಿಟ್ಟರು. ಚಿಂತನಶೀಲರಾಗುತ್ತ ಅಂತರ್ಮುಖಿಗಳಾಗಿಬಿಟ್ಟರು. ಕೇಶವಚಂದ್ರ ಸೇನರ ಬ್ರಹ್ಮಸಮಾಜದ ಸದಸ್ಯರಾಗಿ ಅವರ ಉಪನ್ಯಾಸಗಳನ್ನು ಶ್ರದ್ಧೆಯಿಂದ ಆಲಿಸುತ್ತಿದ್ದರು. ದೇವರು ಇದ್ದಾನೆಯೆ, ಒಂದುವೇಳೆ ಇರುವನಾದರೆ ನಾನು ಅವನನ್ನು ಕಾಣಬಹುದೆ ಎಂಬ ಜಿಜ್ಞಾಸೆ ಆ ಹೊತ್ತಿನಲ್ಲಿಯೇ ಅವರ ಹೃದಯವನ್ನು ಬಲವಾಗಿ ನಾಟಿಕೊಂಡಿತು. ಕಂಡಕಂಡ ಮಹಾಪುರುಷರನ್ನೆಲ್ಲ, "ಸ್ವಾಮಿ, ನೀವು ದೇವರನ್ನು ಕಂಡಿದ್ದೀರಾ" ಎಂದು ನೇರವಾಗಿ ಪ್ರಶ್ನಿಸುತ್ತಿದ್ದರು. ಅವರುಗಳು, "ದೇವರನ್ನು ಕಂಡಿಲ್ಲವಪ್ಪಾ, ಅವನ ವಿಚಾರವಾಗಿ ಕೇಳಿ ತಿಳಿದಿದ್ದೇವಪ್ಪಾ" ಎಂದು ಹೇಳುತ್ತಿದ್ದರು. ಆಗ ವಿವೇಕಾನಂದರು, "ಹೋಗಲಿ ಬಿಡಿ" ಎಂದು ನಿರಾಸೆಯಿಂದ ಹಿಂತಿರುಗುತ್ತಿದ್ದರು. ಪರಮಹಂಸರ ಮಹಿಮೆಯನ್ನು ತಿಳಿದು ಅವರ ದರ್ಶನ ಪಡೆಯಲೆಂದು ಹೋದಾಗಲೂ ವಿವೇಕಾನಂದರು ಅದೇ ಪ್ರಶ್ನೆಯನ್ನು ಕೇಳಿ, ಅವರಿಂದ ಸದುತ್ತರವನ್ನು ಪಡೆದುಕೊಂಡುದು ಮಾತ್ರವಲ್ಲದೆ, ಅವರ ಕೃಪಾಶೀರ್ವಾದಗಳಿಂದ ದೈವ ಸಾನ್ನಿಧ್ಯದ ದಿವ್ಯಾನುಭವಗಳಿಂದ ರೋಮಾಂಚಿತರಾಗಿಬಿಟ್ಟರು; ತಮ್ಮ ಸಂದೇಹಗಳನ್ನೆಲ್ಲ ನೀಗಿಕೊಂಡುಬಿಟ್ಟರು; ಆತ್ಮಸಾಕ್ಷಾತ್ಕಾರದ ಪಥಿಕರಾಗಿ ಜಯಶೀಲರಾಗಿಬಿಟ್ಟರು. ಈ ಪರಿಯ ಶಿಷ್ಯರ ಬರವನ್ನೇ ಹಾರೈಸುತ್ತಿದ್ದ ಪರಮಹಂಸರು ಆಗಿಂದಾಗಲೇ ವಿವೇಕಾನಂದರ ಉಜ್ವಲತೆಯನ್ನು ಮನಗಂಡುಬಿಟ್ಟರು. "ನನ್ನ ಭಕ್ತರಲ್ಲಿ ಕೆಲವರು ನಕ್ಷತ್ರವಾದರೆ ಈ ನರೇಂದ್ರನು ಸೂರ್ಯನಿಗೆ ಸಮಾನ; ಕೆಲವರು ಹತ್ತುದಳದ ಕಮಲವಾದರೆ ಈ ನರೇಂದ್ರನು ಸಾವಿರದಳದ ಕಮಲ; ಕೆಲವರು ಮಡಿಕೆಕುಡಿಕೆಗಳಾದರೆ ಈ ನರೇಂದ್ರನೊಂದು ಗುಡಾಣ; ಇವನು ಜೀವನ್ಮುಕ್ತ, ಲೋಕವನ್ನು ಉದ್ಧರಿಸಲೆಂದೇ ಅವತರಿಸಿ ಬಂದಿದ್ದಾನೆ" ಎಂದು ಅವರು ಬಾಯಿತುಂಬ ಕೊಂಡಾಡುತ್ತಿದ್ದರು.

## ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ

ವಿವೇಕಾನಂದರ ತಂದೆ ವಿಶ್ವನಾಥದತ್ತರು ವಕೀಲರಾಗಿ ಕುಟುಂಬ ನಿರ್ವಹಣೆ ಮಾಡುತ್ತಿದ್ದವರು ಹೃದಯಾಘಾತಕ್ಕೆ ತುತ್ತಾಗಿ ಅಕಾಲಮರಣಕ್ಕೆ ಗುರಿಯಾದರು. ದಾನಿಗಳೂ ಉದಾರಿಗಳೂ ಆಗಿದ್ದ ಅವರು ಕುಟುಂಬಕ್ಕೆಂದು ದುಡ್ಡುಕಾಸು ಕೂಡಿಟ್ಟಿರಲಿಲ್ಲ. ಆಧ್ಯಾತ್ಮಿಕ ಸೆಳೆತಕ್ಕೆ ಸಿಲುಕಿ ತಳಮಳಕ್ಕೆ ತುತ್ತಾಗಿದ್ದ ವಿವೇಕಾನಂದರ ತಲೆಯಮೇಲೆಯೇ ಕುಟುಂಬದ ಜವಾಬ್ದಾರಿಯೆಲ್ಲವೂ ಬಿದ್ದಿತು. ಒಂದು ಹೊತ್ತಿನ ಅನ್ನಸಂಪಾದನೆಯೂ ಕಷ್ಟವಾಗುವಷ್ಟು ಕಠಿಣವಾದ ಬಡತನ ಅವರನ್ನು ಆವರಿಸಿಕೊಂಡುಬಿಟ್ಟಿತು. ಸಣ್ಣಪುಟ್ಟ ಉದ್ಯೋಗಗಳನ್ನು ಮಾಡುತ್ತ, ಮನೆಯವರಿಗೆ ಏನನ್ನಾದರೂ ಒದಗಿಸಿಕೊಟ್ಟು, ಅದು ಅವರಿಗೆ ಸಾಲದೆ ಬರುತ್ತದೆ ಎಂಬ ಕಾರಣದಿಂದ, ಅನೇಕವೇಳೆ ವಿವೇಕಾನಂದರು ತಾವು ಉಪವಾಸ ವಿದ್ದುಬಿಡುತ್ತಿದ್ದರು.

ಅವರ ಬಡತನವನ್ನು ನೀಗಿಸಲು ಶ್ರೀಮಂತ ಮಹಿಳೆಯೊಬ್ಬಳು ವಿವೇಕಾನಂದರ ಅಂದಚೆಂದಗಳಿಗೆ ಮರುಳಾಗಿ ಅಸಭ್ಯ ಸಲಹೆಯೊಂದನ್ನು ಮುಂದಿಟ್ಟಳು. ಒಬ್ಬಳು ಸಾಲದೆಂಬಂತೆ ಇನ್ನೊಬ್ಬಳೂ ಹಾಗೆಯೇ ಅವರಿಗೆ ಗಂಟುಬಿದ್ದಳು. ಅವರ